**ಸಿ.ಸಿ ನಂ. 839/18** **ಪಿ.ಡಬ್ಲ್ಯೂ-2**

**ದಿನಾಂಕ 25/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ** ಶ್ರೀ ಜಿ.ಎನ್.ಎಸ್. ವಕೀಲರಿಂದ

ನನ್ನನ್ನು ಪುರಸಭೆಯಲ್ಲಿ ಪರಿಸರ ಅಭಿಯಂತರರು ಎಂದು ನೇಮಕಾತಿ ಮಾಡಿದ್ದಾರೆ. ಪರಿಸರ ಅಭಿಯಂತರರು ಆಗಿರುವುದರಿಂದ ನೀವು ಅಷ್ಟನ್ನು ಹೊರತುಪಡಿಸಿ ಬೇರೆ ಏನು ಕರ್ತವ್ಯ ನಿರ್ವಹಿಸುತಿವಂತಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಮ್ಮ ಪುರಸಭೆ ಅಧಿಕಾರಿಗಳು ಏನು ಹೇಳುತ್ತಾರೋ ಅದನ್ನು ಮಾಡಬೇಕು ಎಂದು. ಹಕ್ಕು ಪತ್ರ ವಿತರಣೆ  ಅಕ್ರಮ ನಿರ್ಮಾಣ ಇದಕ್ಕೆ ಸಂಬಂಧಪಟ್ಟಂತೆ ನಾನು ನೇಮಕಾತಿ ಹೊಂದಿಲ್ಲ ಎಂದರೆ ಸರಿ. ಯಾವುದಾದರೂ ಸ್ಥಳ ಪರಿಶೀಲನೆ ನೀವು ಮಾಡಬೇಕಾದರೆ ನಿಮ್ಮ ಮೇಲಾಧಿಕಾರಿಗಳು ಲಿಖಿತ ಆದೇಶ ಮಾಡಿದರೆ ಮಾತ್ರ ನೀವು ಹೋಗಬೇಕಾಗುತ್ತದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಮೌಖಿಕವಾಗಿ ಕೆಲವೊಮ್ಮೆ ಹೋಗಬೇಕಾಗುತ್ತದೆ ಎಂದು. ದಿಃ 16.01.2018 ಕ್ಕೆ ನಾವು ಪರಿಶೀಲನೆಗೆ ಹೋಗಲು ನನಗೆ ಲಿಖಿತ ಆದೇಶ ನೀಡಿದ್ದರೋ ಇಲ್ಲವೋ ನನಗೆ ನೆನಪಿಲ್ಲ.  ಲಿಖಿತವಾಗಿ ಆದೇಶ ನೀಡಿದರೂ ಮೌಖಿಕವಾಗಿ ನೀಡಿದರು ನಾವು ಸ್ಥಳಕ್ಕೆ ಹೋಗುತ್ತೇವೆ ಎಂದು ತನಿಖಾಧಿಕಾರಿಗಳಿಗೆ ಈ ಪ್ರಕಣದಲ್ಲಿ ನಾನು ಹೇಳಿಕೆ ನೀಡಿದ್ದೇನೊ ಇಲ್ಲವೋ ನನಗೆ ನೆನಪಿಲ್ಲ.

2. ಲಿಖಿತವಾಗಿ ಆದೇಶ ನೀಡಿರುವುದರ ಬಗ್ಗೆ ನಾನು ಹೇಳಿಕೆ ತನಿಖಾಧಿಕಾರಿಗಳಿಗೆ ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ತಿಳುವಳಿಕೆ ಪತ್ರ ಬಂದ ನಂತರ ನೋಡಿಕೊಂಡಿದ್ದೇನೋ ಇಲ್ಲವೋ ನೆನಪಿಲ್ಲ . ಪುರಸಭೆ ಮೇಲಾಧಿಕಾರಿಗಳು ಯಾವ ಕೆಲಸ ಹೇಳಿದರೂ ನಾವು ಮಾಡಬೇಕೆಂದು ನನ್ನ ನೇಮಕಾತಿ ಆದೇಶದಲ್ಲಿ ನಮೂದು ಆಗಿರುತ್ತದೆ. ಸದರಿ ನೇಮಕಾತಿ ಆದೇಶವನ್ನು ತನಿಖಾಧಿಕಾರಿಗಳಿಗೆ ನಾನು ನೀಡಿಲ್ಲ. ನಮ್ಮ ಪುರಸಭೆಯ  ಮುಖ್ಯಾಧಿಕಾರಿಗಳು ಪೊಲೀಸರಿಗೆ ನೀಡಿದ ವರದಿಯನ್ನು ನಾನು ಓದಿಕೊಂಡಿಲ್ಲ. ನಿಮ್ಮ ಮೇಲಾಧಿಕಾರಿಗಳನ್ನು ಸದರಿ ವರದಿ ಅಥವಾ ಘಟನೆಯ ಬಗ್ಗೆ ನೀವು ಕೇಳಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಾನೇ ಉಪಸ್ಥಿತಳಿದ್ದ ಕಾರಣ ಕೇಳಿಲ್ಲ ಎಂದು.

3. ಘಟನೆ ನಡೆಯಲಾಗಿದೆ ಎನ್ನುವ ಸ್ಥಳದಲ್ಲಿ ನಮ್ಮ ಇಲಾಖೆಯವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ನಾವು ಸದರಿ ದಿನದಂದು ನಾನು ಹೋದ ವಾಹನದ ಸಂಖ್ಯೆ ಹೇಳಿಲ್ಲ.  ನಮ್ಮ ಪುರಸಭೆಯ ಮೇಲಾಧಿಕಾರಿಗಳು ಸಾರ್ವಜನಿಕರಿಂದ ಬಂದ ದೂರು  ಯಾರಿಂದ

ಬಂದಿತ್ತೆಂದು ಮತ್ತು ಯಾವ ದಿನಾಂಕದಂದು ಬಂದಿತ್ತೆಂದು ನನಗೆ ಹೇಳಿರುವುದಿಲ್ಲ. ಅಕ್ರಮ ಕಟ್ಟಡ ನಿರ್ಮಾಣ ಮಾಡುತ್ತಿದ್ದವರಿಗೆ ತಿಳುವಳಿಕೆ ಪತ್ರ ನೀಡಿದ್ದರೋ ಇಲ್ಲವೋ ಯಾವ ದಿನಾಂಕದಂದು ಸದರಿ ತಿಳುವಳಿಕೆ ಪತ್ರ ಜಾರಿಯಾಯಿತೋ ನನಗೆ ಗೊತ್ತಿಲ್ಲ ಸಾಕ್ಷಿ ಹೇಳುತ್ತಾರೆ ಕಂದಾಯ ಅಧಿಕಾರಿಗಳಿಗೆ ಗೊತ್ತಿರುತ್ತದೆ ಎಂದು. ಕಂದಾಯ ಅಧಿಕಾರಿಗಳ ವ್ಯಾಪ್ತಿಗೆ ಬರುವುದರಿಂದ ನಿಮಗೆ ಸ್ಥಳಕ್ಕೆ ಹೋಗುವ ಕಾರ್ಯವ್ಯಾಪ್ತಿ ಇರಲಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ವಾಹನಗಳು ನನ್ನ ವ್ಯಾಪ್ತಿಗೆ ಬರುವ ಕಾರಣ ನಾನು ಅವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಬೇಕಾಯಿತು ಎಂದು.

4. ವಾಹನವನ್ನು ಎಲ್ಲೆಲ್ಲಿ ನಿಯೋಜಿಸಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ನಮ್ಮಲ್ಲಿ ಇರುವುದು ಒಂದು ಜೆ.ಸಿ.ಬಿ ವಾಹನ ಪಟ್ಟಣದಲ್ಲಿ ಯಾವುದೇ ಚರಂಡಿ ಅಥವಾ ರಸ್ತೆ ತೆರವು ಮಾಡಬೇಕಾದರೆ ಸದರಿ ಜೆ.ಸಿ.ಬಿ ವಾಹನವನ್ನು ನಿಯೋಜಿಸುತ್ತೇವೆ ಎಂದು. ವಾಹನ ನಿಯೋಜನೆ ಮಾಡಿದ ಬಗ್ಗೆ ಲಾಗ್ ಪುಸ್ತಕದಲ್ಲಿ ಇರುತ್ತದೆ ಎಂದರೆ ಸರಿ. ದಿಃ 16.01.2018 ರಂದು ನಮೂದಾಗಿರುವ ಲಾಗ್ ಪುಸ್ತಕವನ್ನು ನೀವು ತನಿಖಾಧಿಕಾರಿಗಳಿಗೆ ನೀಡಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಾನು ನೀಡಿಲ್ಲ, ನಮ್ಮ ಸೆಕ್ಷನ್ ರವರು ನೀಡಿರಬಹುದು. ನೀವು ಮೇಲ್ವಿಚಾರಕರು ಆಗಿರುವ ಕಾರಣ ನಿಮಗೆ ತಿಳಿಯದ ಹಾಗೆ ಸದರಿ ಪುಸ್ತಕ ನೀಡಲು ಬರುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಮ್ಮ ಪುರಸಭೆಯ ಮೇಲಾಧಿಕಾರಿಗಳು ಇತರೆ ಸರ್ಕಾರಿ ಇಲಾಖೆಗಳಿಗೆ ಅಥವಾ ನ್ಯಾಯಾಲಯಕ್ಕೆ ನೀಡುವುದಕ್ಕಾಗಲೀ ಯಾವುದೇ ಪುಸ್ತಕ ನೀಡಬೇಕೆಂದು ಆದೇಶಿಸಿದರೆ ನನ್ನ ಅನುಮತಿ ಇಲ್ಲದೆಯೂ ಕೊಡಬಹುದು ಎಂದು. ಈ ರೀತಿ ನೀಡಲು ಠರಾ ಒಂದು ಆಗಬೇಕು ಎಂದು ಸೂಚಿಸಲು ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ನಿಯಮ ನಮ್ಮ ಪುರಸಭೆ ಕಾಯ್ದೆಯಲ್ಲಿ ಯಾವುದು ಇಲ್ಲ.

5. ನಾವು ಸ್ಥಳಕ್ಕೆ ಹೋದಾಗ ಸದರಿ ದಿನದಂದು ಸುಮಾರು 30 ಜನ ಸಾರ್ವಜನಿಕರು ಸೇರಿದ್ದರು. ಯಾರ್ಯಾರು ಸೇರಿದ್ದರು ಎಂದು ನನಗೆ ನಿರ್ಧಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಸಾರ್ವಜನಿಕರು 30 ಜನ ಇದ್ದ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಲ್ಲ ಎಂದರೆ ಸರಿ. ನನ್ನ ಹೇಳಿಕೆಯನ್ನು ತನಿಖಾಧಿಕಾರಿಗಳು ಯಾವ ದಿನಾಂಕದಂದು ಪಡೆದರೋ ನನಗೆ ಈಗ ಹೇಳಲಾಗುವುದಿಲ್ಲ. ಆರೋಪಿಗಳು ನಮಗೆ ಯಾರಿಗೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಮ್ಮ ಪುರಸಭೆಯ ಮುಖ್ಯಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ

ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರು ಅವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಳೆನರಸೀಪುರ.**